## ಬೃಹತ್ ಚಹಾ ಕೆಟಲ್!



ವರ್ತಕರು ತಮ್ಮ ವ್ಯಾಪಾರವನ್ನು ಹೆಚ್ಚು ಮಾಡಿಕೊಳ್ಳಲು ಮತ್ತು ಗ್ರಾಹಕರನ್ನು ತಮ್ಮತ್ತ ಸೆಳೆದುಕೊಳ್ಳಲು ಹತ್ತು ಹಲವು ರಿಯಾಯಿತಿ, ಸ್ಕೀಮ್‌ಗಳನ್ನು, ವಿವಿಧ ಆಫರ್‌ಗಳನ್ನು ಕೊಡುವುದು ಸಹಜ. ಆದರೆ ನಾವಿಲ್ಲಿ ನೋಡುವ ಸಂಗತಿಯೇ ಬೇರೆ ಇದೆ. ರಾಯಚೂರು ತಾಲ್ಲೂಕಿನ ಯರಗೇರಾ ಗ್ರಾಮವನ್ನು ಪ್ರವೇಶಿಸುವಾಗಲೇ ರಸ್ತೆಯ ಬದಿ ಹಳದಿ ಬಣ್ಣದ ಬೃಹತ್ ಚಹಾ ಕೆಟಲ್ ಒಂದು ಗಮನ ಸೆಳೆಯುತ್ತದೆ.

ಚಹಾವನ್ನು ಒಲೆಯ ಮೇಲೆ ಬಿಸಿ ಮಾಡಿ, ನೇರವಾಗಿ ಗ್ಲಾಸಿಗೆ ಸುರಿಯುವ ಅಲ್ಯುಮಿನಿಯಂ ಪರಿಕರವೇ ಈ ಕೆಟಲ್. ಹಿಂದಿನ ಕಾಲದಲ್ಲಿ ಹೆಚ್ಚಾಗಿ ಹೋಟೆಲ್‌ಗಳಲ್ಲಿ ಇಂತಹ ಕೇಟ್ಲಿಗಳನ್ನು ಕಾಣುತ್ತಿದ್ದೆವು. ಇಂದು ಇದರ ಬಳಕೆ ಕಡಿಮೆಯಾಗಿದೆ. ಇರಾನಿ ಚಹಾ ಮಾಡುವ ಹೋಟೆಲ್ ಇದಾಗಿದ್ದು, ಇದರ ಒಳಗಿನಿಂದಲೇ ಚಹಾ ಕೊಡುವ ವ್ಯವಸ್ಥೆಯನ್ನು ಮಾಡಲಾಗಿದೆ. ವಿಭಿನ್ನ ಆಲೋಚನೆಯೊಂದಿಗೆ ಜನರನ್ನು ನಿಂತು ನೋಡುವಂತೆ ಮಾಡಿರುವುದು ಆಕರ್ಷಣೀಯವಾದದ್ದು.

—ಈರಣ್ಣ ಬೆಂಗಾಲಿ, ರಾಯಚೂರು

## ಮೊಟ್ಟೆಯೊ ಗೋಡಂಬಿಯೊ?



ಧರ್ಮಸ್ಥಳ ಸಮೀಪದ ಬೆಳ್ತಂಗಡಿ ತಾಲ್ಲೂಕಿನ ಲಾಯ್ಲ ಗ್ರಾಮದ ಬೇಲಾಜಿಯ ಪ್ರಶಾಂತ್ ಎಂಬುವವರು ಸಾಕಿದ್ದ ಕೋಳಿಯೊಂದು ಗೋಡಂಬಿ ಆಕಾರದ ಮೊಟ್ಟೆ ಇಡುವ ಸುದ್ದಿಯನ್ನು ಈಚೆಗೆ ದೂರದರ್ಶನದಲ್ಲಿ ನೋಡಿದ್ದೆ. ಕುತೂಹಲದಿಂದ ಈ ಪ್ರಕೃತಿ ವಿಸ್ಮಯ ನೋಡಲು ಅಲ್ಲಿಗೆ ಹೋಗಿದ್ದೆ.

ಪ್ರಶಾಂತ್ ಸಾಕಿರುವ ಕೋಳಿಯು ಮೊದಲ ಬಾರಿಗೆ ಮೊಟ್ಟೆಯಿಡಲು ಆರಂಭಿಸಿತು. ಅಂತೆಯೇ ಅದು ಇಟ್ಟ ಮೊಟ್ಟೆಯು ಸಹಜ ಮೊಟ್ಟೆಗಳ ಆಕಾರಕ್ಕಿಂತ ಭಿನ್ನವಾಗಿತ್ತು. ಅದು ಇಟ್ಟ ಪ್ರತಿಯೊಂದು ಮೊಟ್ಟೆಯೂ ಗೋಡಂಬಿ ಆಕಾರದಲ್ಲಿದ್ದವು. ಇದು ವಿಚಿತ್ರವೆನಿಸಿತ್ತಲ್ಲದೇ ವಾಸ್ತವವಾಗಿತ್ತು.

—ಡಾ.ಕರವೀರಪ್ರಭು ಕ್ಯಾಲಕೊಂಡ,
ಬಾದಾಮಿ

## ಕಣ್ಮರೆಯುತ್ತ 'ಕಣಜ'!



ಹಿಂದೆ ಇದ್ದ ಕಣಜದ ಪರಿಕಲ್ಪನೆಯೇ ಚೆನ್ನಾಗಿತ್ತು. ಈಗಿನಂತೆ ರೆಫ್ರಿಜರೇಟರ್, ದೊಡ್ಡ ದೊಡ್ಡ ಶೀತಲ ಶೇಖರಣಾ ಉಗ್ರಾಣಗಳು ಇರುತ್ತಿರಲಿಲ್ಲ. ದವಸ ಧಾನ್ಯಗಳನ್ನು ಸಂಗ್ರಹಿಸಿಡಲು ನಾನಾ ರೂಪದಲ್ಲಿ ಕಣಜಗಳನ್ನು ಜನರೇ ರೂಪಿಸಿಕೊಳ್ಳುತ್ತಿದ್ದರು. ನೆಲ್ಲುಹುಲ್ಲು, ಮಣ್ಣು ಹಾಗೂ ಸುಣ್ಣದಿಂದ ಮಾಡಿದ ಕಣಜಗಳು, ನೆಲದಡಿ ನಿರ್ಮಿಸಲಾಗುತ್ತಿದ್ದ ಹಗೇವು, ಬಿದಿರಿನಿಂದ ರೂಪಿಸಿದ ಕಣಜಗಳು ಹಿಂದೆ ಹೆಚ್ಚು ಚಾಲ್ತಿಯಲ್ಲಿದ್ದವು. ಅಂತಹದೇ ಒಂದು ಮಾದರಿಯ ಬೆತ್ತ ಮತ್ತು ತೆಳು ಬಿದಿರಿನಿಂದ ತಯಾರಿಸಲಾದ ಕಣಜದ ಚಿತ್ರವಿದು. ಕಾಡೆ ಹಾಗೂ ಅದಕ್ಕೂ ಹೆಚ್ಚಿನ ಧಾನ್ಯಗಳನ್ನು ಈ ಕಣಜದಲ್ಲಿ ತುಂಬಿಡುವುದು ಸಾಮಾನ್ಯವಾಗಿತ್ತು.

—ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

## ಧರ್ಮ ಸಾಮರಸ್ಯ

ದೇಶದಲ್ಲಿ ಪರಸ್ಪರ ಮತ ಮತಗಳ ನಡುವೆ, ಧರ್ಮ ಧರ್ಮಗಳ ನಡುವೆ ಸಾಮರಸ್ಯ ಮಾಯವಾಗಿ ಸಂಘರ್ಷ ಹೆಚ್ಚುತ್ತಿದೆ. ಇದರ ನಡುವೆಯೂ ಸೌಹಾರ್ದತೆಯ ಕಾರ್ಯಗಳೂ ನಡೆಯುತ್ತಿವೆ. ಅಂತಹ ಸೌಹಾರ್ದತೆಗೆ ಹಿಡಿದ ಕನ್ನಡಿ ಈ ಬ್ಯಾನರ್!

ಈಚೆಗೆ ನಾವು ಗುಜರಾತ್–ರಾಜಸ್ಥಾನ್ ಪ್ರವಾಸಕ್ಕೆಂದು ಹೋಗಿದ್ದೆವು. ಆಗ ನವರಾತ್ರಿಯ ಹಬ್ಬದ ಸಂಭ್ರಮ ಎಲ್ಲಾ ಕಡೆ ಜೋರಾಗಿತ್ತು. ರಾಜಸ್ಥಾನದ ಅಬು ಪರ್ವತದಲ್ಲಿ ನವರಾತ್ರಿಯ ನೃತ್ಯ ಕಾರ್ಯಕ್ರಮದ ಪ್ರಯುಕ್ತ ಸಾರ್ವಜನಿಕ ಸ್ಥಳವೊಂದರಲ್ಲಿ ಸರ್ವ ಧರ್ಮ ಉತ್ಸವ ಸಮಿತಿಯ ಈ ಬ್ಯಾನರ್ ನಮ್ಮನ್ನು ಆಕರ್ಷಿಸಿತು.

ಎಲ್ಲಾ ಧರ್ಮಗಳ ಚಿಹ್ನೆಯನ್ನು ಬ್ಯಾನರ್‌ನ ಮೇಲ್ಭಾಗದಲ್ಲಿ ಹಾಕಿ ಎಲ್ಲಾ ಜನಾಂಗದವರನ್ನೂ ಪ್ರೀತಿಯಿಂದ ಆಹ್ವಾನಿಸಲಾಗಿತ್ತು. ಎಲ್ಲ ಧರ್ಮೀಯರೂ ಕೂಡಿ ಆಚರಿಸುವ ಆ ನೃತ್ಯದಲ್ಲಿ ನಾವೂ ಭಾಗವಹಿಸಿ ಆನಂದಿಸಿದೆವು. ಇದಲ್ಲವೇ ಧರ್ಮ ಸಾಮರಸ್ಯ? ದೇಶದೆಲ್ಲೆಡೆ ಈ ಸಾಮರಸ್ಯ ಮತ್ತು




ಸಹಿಷ್ಣುತೆ ನೆಲೆಗೊಳ್ಳುವ ನಿಟ್ಟಿನಲ್ಲಿ ಅಲ್ಲೊಂದು ಇಲ್ಲೊಂದು ಎಂಬಂತೆ ನಡೆಯುವ ಸೌಹಾರ್ದತೆಯ ಕಾರ್ಯಗಳು ಹೆಚ್ಚಾಗಲಿ ಎಂಬುದು ನನ್ನ ಆಶಯ.

—ಬಿ. ಸತ್ಯನಾರಾಯಣ ಅರಸ, ಅರೆಬೈಲು